


# ಕಾನನ

## ನಿಸರ್ಗದೆಡೆಗೆ ಪಯಣ

ಮಾರ್ಚ್ ೨೦೧೮

BANNERUGHATTA

WILDLIFE
CONSERVATION
GROUP

# ಕಾನನ

ನಿಸರ್ಗದೆಡೆಗೆ ಪಯಣ

**ಸಂಪಾದಕೀಯ**

ಅಶ್ವಥ ಕೆ.ಎನ್

**ಲೇಖನ ವೃಂದ**

ಸ್ವಾಮಿ ಸೌಖ್ಯಾನಂದಜೀ ಮಹಾರಾಜ್

ಅಜಯ ಗಿರಿ

ಮಹದೇವ ಕೆ.ಸಿ

ಶಂಕರಪ್ಪ ಕೆ.ಪಿ

ಸುಬ್ಬು ಬಾದಲ್

ಅಶ್ವಥ ಕೆ.ಎನ್

ಚರಣರಾಜ ಮತ್ತೀಹಳ್ಳಿ

**ಕರಡು ತಿದ್ದುಪಡಿ**

ಮುರಳಿ ಎಸ್

**ವಿನ್ಯಾಸ**

ಮಹದೇವ ಕೆ.ಸಿ

**ಛಾಯಾಚಿತ್ರ**

ಕಾರ್ತಿಕ್ ಎ.ಕೆ

**ಇ-ವಿಳಾಸ**

kaanana.mag@gmail.com

www.issuu.com/kaanana


**ಮುಖಪುಟ**

ಕಾಡು

WILDLIFE
CONSERVATION
GROUP



ಸಂಪಾದಕೀಯ



ನಾಯಿಯನ್ನು ಹೆಚ್ಚು ಮುದ್ದಿಸಬೇಡ



ಮನುಷ್ಯ ಮತ್ತು ಕಾಳಿಂಗ ಹಾವಿನ ಸಂಘರ್ಷ



ಚಿಟ್ಟೆ ಗುರುತು



ಹಾವು ಹಾರುತ್ತಿದೆ ನೋಡಿದಿರಾ?



ಭೀಮರಾಜ



ಪ್ರಕೃತಿ ಬಿಂಬ



ಮುಸ್ಸಂಜೆಯ ಹನಿಗಳು

# ಸಂಪಾದಕೀಯ


ಬರಿದಾಗುತ್ತಿರುವ ಕಾಡುಗಳು, ಅವನತಿಹೊಂದುತ್ತಿರುವ ಮೃಗ ಪಕ್ಷಿಗಳು, ಬತ್ತುತ್ತಿರುವ ಜಲ, ಹೆಚ್ಚುತ್ತಿರುವ ಜಾಗತಿಕ ತಾಪಮಾನ, ಸಾಲುಸಾಲಾಗಿ ಬರುತ್ತಿರುವ ಸಮಸ್ಯೆಗಳು ಇವೆಲ್ಲವುಗಳಿಗೆ ಮೂಲ ಕಾರಣ ಅರಣ್ಯನಾಶ . ನಗರೀಕರಣ, ಅಭಿವೃದ್ಧಿ ಎಂಬ ಗುಂಗಿನಲ್ಲಿ ನಾವು ಇರುವ ಮರಗಳನ್ನು ಕಾಡುಗಳನ್ನು ಕಡಿದಿದ್ದೇವೆ .ನಮ್ಮ ಉಸಿರಾಟಕ್ಕೆ ಬೇಕಾದ ಶುದ್ಧ ಗಾಳಿ, ಕುಡಿಯುವ ಜಲ, ತಿನ್ನುವ ಆಹಾರ ಎಲ್ಲವುದಕ್ಕೂ ಮೂಲ ಕಾರಣ ಕಾಡೆಂಬುದನ್ನು ಮರೆತಿದ್ದೇವೆ . ನಗರದ ಮಾಲ್ ಗಳಲ್ಲಿ ಸಿಗುವ ರುಚಿ ರುಚಿಯಾದ ಬಣ್ಣ ಬಣ್ಣದ ಆಹಾರಗಳನ್ನು ತಿನ್ನುತ್ತಿರುವ ನಗರವಾಸಿಗಳು ಈ ಎಲ್ಲಾ ಆಹಾರಗಳ ಮೂಲ ಕಾಡೆಂಬುದನ್ನು ಮರೆತು, ಬೇಸಿಗೆಯಲ್ಲಿ ಸೂರ್ಯನ ಬಿಸಿ ಹೆಚ್ಚಾದರೆ ಎ ಸಿ ಗಳನ್ನು ಹಾಕಿಕೊಂಡು ತಣ್ಣನೆ ಕಾಲಕಳೆಯುತ್ತಿದ್ದಾರೆಯೇ ವಿನಹ ಹೆಚ್ಚು ಜನಕ್ಕೆ, ಅರಣ್ಯ ನಾಶಕ್ಕೆ ಮೂಲ ಕಾರಣ ನಾವೇ ಎಂಬುದು ತಿಳಿಯದೆ ಮರೆತು ದುಡ್ಡಿನ ಹಿಂದೆ ಓಡುತ್ತಿರುವುದು ಬೇಸರದ ಸಂಗತಿ.

ಇತ್ತ ಅರಣ್ಯಗಳ ಸಮೀಪದಲ್ಲಿ ವಾಸ ಮಾಡುತ್ತಿರುವ ಜನರು ಪಟ್ಟಣದ ಜನರಿಗೆ ಆಹಾರ ಒದಗಿಸಲು ತಮ್ಮ ವ್ಯವಸಾಯ ಜಾಗವನ್ನು ವಿಸ್ತರಿಸಲು ಪಕ್ಕದಲ್ಲಿರುವ ಕಾಡನ್ನು ಕಡಿದು ಕೃಷಿಭೂಮಿಯನ್ನಾಗಿಸುತ್ತಿದ್ದಾರೆ. ಹೀಗೆ ದಿನನಿತ್ಯದ ಮೂಲಭೂತ ವಸ್ತುಗಳಾದ ಬಟ್ಟೆ, ವಿದ್ಯುತ್, ಪೇಪರ್, ಕುರ್ಚಿ, ಮನೆಸಲಕರಣೆಗಳು, ಔಷಧಿ ಮುಂತಾದ ಎಲ್ಲಾ ಮನುಷ್ಯನ ಬೇಕುಗಳನ್ನು ಪೂರೈಸಲು ಅರಣ್ಯಗಳು ಬಹುದೊಡ್ಡ ಪ್ರಮಾಣದಲ್ಲಿ ಬಲಿಯಾಗುತ್ತಿವೆ .ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಭಾರತದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಪ್ರತಿವರ್ಷ ಸರಾಸರಿ 130ಲಕ್ಷ ಹೆಕ್ಟೇರ್ ಅರಣ್ಯ ನಾಶವಾಗಿದೆ. ಈಗಿನ ಜನರಂತೂ ಈ ಮಾಯಾಜಗತ್ತಿನಲ್ಲಿ ಮುಳುಗಿ ಹೋಗಿದ್ದಾರೆ, ನಿಸರ್ಗ ಮಾತೆಯ ಜೊತೆ ಇರಲು ಇಷ್ಟವಿಲ್ಲದ ಜನರು ಹೆಚ್ಚುತ್ತಿದಾರೆ, ಹೋಗಲಿ ತಮ್ಮ ಮಕ್ಕಳಿಗಾದರೂ ಈ ಕಾಡು, ಈ ಜಲ, ಈ ಮರ-ಗಿಡ, ಈ ಭೂಮಿ ಮಹತ್ವವನ್ನು ತಿಳಿಸುವುದರಿಂದ ಕಾಡುಗಳನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳಬಹುದಾ?! ಒಮ್ಮೆ ಯೋಚಿಸಿ.!

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ಇ-ಅಂಚೆ : kaanana.mag@gmail.com

**Wildlife Conservation Group**



# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು

### * ನಾಯಿಯನ್ನು ಹೆಚ್ಚು ಮುದ್ದಿಸಬೇಡ.

ಒಮ್ಮೆ ಒಬ್ಬ ಭಕ್ತನು ಶ್ರೀರಾಮಕೃಷ್ಣರನ್ನು, ನಾನು ನಮ್ಮ ದುಷ್ಟ ಸಂಸ್ಕಾರಗಳಿಂದ ಹೇಗೆ ರಕ್ಷಿಸಿಕೊಳ್ಳಲಿ , ಅವು ನನಗೆ ತುಂಬ ತೊಂದರೆ ಕೊಡುತ್ತಿವೆ ಎಂದು ತನ್ನ ಅಳಲನ್ನು ತೋಡಿಕೊಂಡನು . ಅದಕ್ಕೆ ಶ್ರೀರಾಮಕೃಷ್ಣರು :





ಒಬ್ಬನ ಬಳಿ ಒಂದು ಮುದ್ದು ನಾಯಿ ಇತ್ತು. ಅವನು ಅದನ್ನು ಪ್ರೀತಿಯಿಂದ ಮುದ್ದಾಡುತ್ತಿದ್ದನು. ಹೋದ ಕಡೆಯಲ್ಲಿ ಅದನ್ನು ಎತ್ತಿಕೊಂಡು ಹೋಗುತ್ತಿದ್ದನು. ಅದರೊಡನೆ ಆಟ ಆಡುತ್ತಿದ್ದನು , ಒಬ್ಬ ತಿಳಿದವನು ಈ ಮೂರ್ಖನ ನಡವಳಿಕೆಯನ್ನು ನೋಡಿ, ನಾಯಿಯ ಮೇಲೆ ಅಷ್ಟೊಂದು ಪ್ರೇಮವನ್ನು ತೋರಬೇಡವೆಂದು ಎಚ್ಚರಿಸಿದನು. ಎಷ್ಟೇ ಆದರೂ ಅದೊಂದು ವಿವೇಚನೆ ಇಲ್ಲದ ಮೃಗ. ಒಂದಲ್ಲ ಒಂದು ದಿನ ಕಚ್ಚಬಹುದು ಅಥವ ಬೇರೆ ರೀತಿಯಲ್ಲಿ ತೊಂದರೆ ನೀಡಬಹುದು ಎಂದನು. ನಾಯಿಯ ಯಜಮಾನ ಈ ಎಚ್ಚರಿಕೆಯನ್ನು ಅರಿತು, ನಾಯಿಯನ್ನು ಕೈಗಳಿಂದ ಇಳಿಸಿ, ಇನ್ನುಮುಂದೆ ಅದನ್ನು ಅಷ್ಟು ಮುದ್ದುಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದನು.

ಮೊದಮೊದಲು ನಾಯಿಗೆ ತನ್ನ ಯಜಮಾನನ ಮನಸ್ಸು ಬದಲಾವಣೆಯಾಗಿದೆ ಎಂದು ತಿಳಿಯದೆ, ತನ್ನನ್ನು ಎತ್ತಿ ಮುದ್ದಾಡಿಸಲಿ ಎಂದು ಅನೇಕ ವೇಳೆ ಅವನ ಹತ್ತಿರ ಬರುತ್ತಿತ್ತು. ಅನೇಕ ವೇಳೆ ಪೆಟ್ಟು ತಿಂದ ಮೇಲೆ ಅದು ಯಜಮಾನನಿಗೆ ತೊಂದರೆ ಕೊಡುವುದನ್ನು ಬಿಟ್ಟಿತು. ನಿನ್ನ ಸ್ಥಿತಿಯು ಕೂಡ ಅದರಂತೆ. ನಿನ್ನ ಮನಸ್ಸಿನಲ್ಲೂ ಇಷ್ಟುದಿನವು ಮುದ್ದಾಡುತ್ತಿರುವ ನಾಯಿಯು ನೀನು ಈಗ ಅದರಿಂದ ಪಾರಾಗಬೇಕೆಂದು ಬಯಸಿದರೂ ಅದು ನಿನ್ನನ್ನು ಸುಲಭವಾಗಿ ಬಿಡುವುದಿಲ್ಲ. ಆದರು ಅದರಿಂದ ತೊಂದರೆ ಏನೂ ಇಲ್ಲ. ಇನ್ನು ನಾಯಿಯನ್ನು ಮುದ್ದಿಸಬೇಡ, ಅದು ನಿನ್ನ ಹತ್ತಿರ ಮುದ್ದಾಡಿಸಿಕೊಳ್ಳಲು ಬಂದಾಗಲೆಲ್ಲ ಚೆನ್ನಾಗಿ ಪೆಟ್ಟನ್ನು ಕೊಡು. ಕೆಲವು ದಿನಗಳಾದ ಮೇಲೆ ಅರ್ಧ ಕಾಟದಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದುವೆ.

" ದುಷ್ಟ ಕೆಲಸಗಳಿಂದ ದೂರವಿರುವುದರಿಂದ ದುಷ್ಟ ಸಂಸ್ಕಾರಗಳಿಂದ ಪಾರಾಗಬಹುದು"

- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್

# ಮನುಷ್ಯ ಮತ್ತು ಕಾಳಿಂಗ ಹಾವಿನ ಸಂಘರ್ಷ




ಕಾಳಿಂಗ ಸರ್ಪವು ಪ್ರಪಂಚದ ವಿಷಯುಕ್ತ ಹಾವುಗಳಲ್ಲೆ ಅತಿ ಉದ್ದವಾಗಿ ಬೆಳೆಯುವ ಹಾವು. ದಕ್ಷಿಣ ಏಷ್ಯಾ, ಆಗ್ನೇಯ ಏಷ್ಯಾ ಮತ್ತು ಪೂರ್ವ ಏಷ್ಯಾದ ದಕ್ಷಿಣದವರೆಗೆ ಇದರ ಆವಾಸಸ್ಥಾನ ಹರಡಿದೆ. ಭಾರತದ ಪಶ್ಚಿಮ ಘಟ್ಟಗಳು, ಈಶಾನ್ಯ ಭಾರತ ಮತ್ತು ಅಂಡಮಾನ್ ದ್ವೀಪ ಇವುಗಳ ವಾಸಸ್ಥಾನ. ಕಾಡುಗಳ ನಾಶದಿಂದ ಕಾಳಿಂಗ ಸರ್ಪದ ಆವಾಸಸ್ಥಾನದ ಕೆಲ ನೆಲೆಗಳಲ್ಲಿ ಇದರ ಸಂಖ್ಯೆ ಇಳಿಮುಖವಾಗಿದೆ. ಇದನ್ನು 2012ರಲ್ಲಿ ಅಪಾಯದಂಚಿನಲ್ಲಿರುವ ಜೀವಿ ಎಂದು ಘೋಷಿಸಲಾಯಿತು ಹಾಗೂ International Union for Conservation of Nature ನ ಕೆಂಪು ಪಟ್ಟಿಯಲ್ಲಿ ಸೇರಿಸಲಾಯಿತು. ಭಾರತದಲ್ಲಿ ಇದು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಶೆಡ್ಯೂಲ್ 2ರ ಅಡಿಯಲ್ಲಿ ಸಂರಕ್ಷಿತ ಜೀವಿಯಾಗಿದೆ. ಕಾಳಿಂಗ ಸರ್ಪವು ನೋಡಸಿಗುವುದು ಅಪರೂಪ. ಆದರೆ ಇತ್ತೀಚಿನ ದಿನಗಳಲ್ಲಿ ಮನುಷ್ಯ ಮತ್ತು ಕಾಳಿಂಗ ಹಾವಿನ ಸಂಘರ್ಷ ಭಾರತದ ಪಶ್ಚಿಮ ಘಟ್ಟಗಳು, ಈಶಾನ್ಯ ಭಾರತದಲ್ಲಿ ಸರ್ವೇ ಸಾಮನ್ಯವಾಗಿದೆ. ಹಾವುಗಳನ್ನು ನೋಡಿದ ನಂತರ ಒಂದೋ ಹಾವುಗಳನ್ನು ಕೊಲ್ಲಲಾಗುತ್ತದೆ ಅಥವಾ 'ರಕ್ಷಿಸಿ' ನಂತರ ಹಿಡಿದ ಸ್ಥಳದಿಂದ ದೂರದ ಜಾಗಕ್ಕೆ ಸ್ಥಳಾಂತರಿಸಲಾಗುತ್ತದೆ.

**ಕಾಳಿಂಗ ಸರ್ಪದ ಪರಿಸರ**

ಸಂಶೋಧನೆ ಹಾಗೂ ಅಧ್ಯಯನಗಳಿಂದ ಈ ಹಾವಿನ ಬಗ್ಗೆ ಅಮೂಲ್ಯ ಒಳನೋಟಗಳು ಮತ್ತು ಮಾಹಿತಿಗಳು ಲಭ್ಯವಾಗಿವೆ. ಪ್ರಪಂಚದಲ್ಲಿ ಮೊಟ್ಟಮೊದಲ ಬಾರಿಗೆ ವನ್ಯವಾಸಿ ಕಾಳಿಂಗ ಸರ್ಪದ ಪರಿಸರದ ಬಗೆಗೆ ಅಧ್ಯಯನ ಆರಂಭಿಸಲಾಯಿತು. ಈ ಅಧ್ಯಯನವನ್ನು 'ಆಗುಂಬೆಯ ಮಳೆಕಾಡು ಸಂಶೋಧನಾ ಕೇಂದ್ರದಲ್ಲಿ' ನಡೆಸಲಾಯಿತು. ಈ

ಅಧ್ಯಯನದಿಂದ ಕೆಲವು ಆಸಕ್ತಿಕರ ಮಾಹಿತಿ ಲಭ್ಯವಾಯಿತು. ಕಾಳಿಂಗ ಹಾವುಗಳು ತನ್ನದೇ ಆದ ಒಂದು ಸರಹದ್ದಿನೊಳಗೆ ಜೀವಿಸುತ್ತವೆ ನಮಗೆ ತಿಳಿದು ಬಂದಿದೆ. ಈ ಹಾವಿನ ಸರಹದ್ದು 8 ರಿಂದ 10 ಕಿ.ಮೀ ತ್ರಿಜ್ಯದಷ್ಟು ವ್ಯಾಪ್ತಿಯನ್ನು ಹೊಂದಿದೆ. ಕಾಳಿಂಗ ಸರ್ಪವು ಜೀವನದ ಬಹು ಭಾಗ ವಿರಮಿಸುವುದರಲ್ಲೇ ಕಳೆಯುತ್ತದೆ. ಸಂತಾನಭಿವೃದ್ಧಿಯ ಕಾಲದಲ್ಲಿ (ಮಾರ್ಚ್ ನಿಂದ ಮೇ) ಮಾತ್ರ ಸಂಗಾತಿಗಳನ್ನು ಹುಡುಕಾಟದಲ್ಲಿ ಹೆಚ್ಚಿನ ಸಂಚಾರ ನಡೆಸುತ್ತದೆ. ಮರಗಳನ್ನೇರುವುದರಲ್ಲಿ ಹಾಗೂ ಈಜುವುದರಲ್ಲಿ ಚಾಣಾಕ್ಷವಾಗಿವೆ. ಕಾಳಿಂಗವು ಆಹಾರ ಸರಪಳಿಯಲ್ಲಿ ಮೇಲುವರ್ಗದ (apex predators) ಜೀವಿಯಾಗಿದ್ದು, ಹೆಚ್ಚಾಗಿ ಹಾವುಗಳನ್ನ ತಿಂದು ಜೀವಿಸುತ್ತವೆ. ಒಂದು ಜೀವಿ ತನ್ನಂತಹದೆ ಇನ್ನೊಂದು ಜೀವಿಯನ್ನು ಭಕ್ಷಣೆ ಮಾಡುವುದಕ್ಕೆ ಸ್ವಜಾತಿ ಭಕ್ಷಣೆ ಎನ್ನಲಾಗುತ್ತದೆ. ಕಾಳಿಂಗವು ಸ್ವಜಾತಿ ಭಕ್ಷಣೆಯನ್ನು ಮಾಡುತ್ತದೆ. ಕಾಳಿಂಗ ಸರ್ಪವು ಹೆಬ್ಬಾವುಗಳನ್ನು ತಿಂದ ಬಗ್ಗೆ ಮಾಹಿತಿ ಲಭ್ಯವಿದೆ. ಉಡವನ್ನು ತಿಂದ ಬಗ್ಗೆಯೂ ಮಾಹಿತಿ ಇದೆ, ಆದರೆ ಕಾಳಿಂಗ ಸರ್ಪವು ಹಾವುಗಳನ್ನಲ್ಲದೆ ಬೇರೆ ಆಹಾರವನ್ನು ಸೇವಿಸುವುದು ಅಪರೂಪ.

**ಪರಿಸರದಲ್ಲಿ ಉಪಯುಕ್ತತೆ**

ಇಲಿ, ಹೆಗ್ಗಣಗಳು ಶೇ 25ರಷ್ಟು ಆಹಾರ ಧಾನ್ಯಗಳನ್ನು ಹಾಳು ಮಾಡುತ್ತವೆ ಹಾಗೂ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಿವೆ. ಹಾವುಗಳಿಗೆ ತನ್ನದೆ ಆದ ಉಪಯುಕ್ತತೆ ಇದ್ದು, ಕಾಳಿಂಗ ಮತ್ತು ಇತರೆ ಹಾವುಗಳು ಸಮತೋಲನ ಕಾಪಾಡುವ ಮೂಲಕ ಪರಿಸರವನ್ನು ಸಮತೋಲನದಲ್ಲಿರಿಸುತ್ತವೆ. ಆಹಾರ ಸರಪಳಿಯ ಮೇಲುವರ್ಗದ ಕಾಳಿಂಗ ಹಾವುಗಳಿಲ್ಲದಿದ್ದರೆ ಇತರೆ ಹಾವುಗಳ ಸಂಖ್ಯೆ ಹೆಚ್ಚುತ್ತದೆ.

**ಸಂಘರ್ಷಕ್ಕೆ ಕಾರಣಗಳು**

ಕಾಳಿಂಗ ಸರ್ಪವು ಕಾಡುಗಳ ನಾಶ, ಉದ್ಯಮೀಕರಣ, ಕಾಡುಗಳ ಒತ್ತುವರಿ ಮತ್ತು ಕೃಷಿಯಲ್ಲಿನ ಬದಲಾವಣೆಗಳಿಂದ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಿದೆ. ನಮ್ಮ ಅಧ್ಯಯನಗಳು ಕಾಳಿಂಗ ಹಾವು ಕೇವಲ ದೊಡ್ಡ ಕಾಡಿನಲ್ಲಿ ವಾಸಿಸದೆ, ಮಾನವ ನಿರ್ಮಿತ ಪರಿಸರ ಉದಾಹರಣೆಗೆ ಗದ್ದೆ ಮತ್ತು ತೋಟಗಳಿಗೂ ಒಗ್ಗಿಕೊಳ್ಳುತ್ತವೆ ಎಂದು ತೋರಿಸಿವೆ. ಕೆಲವು ಕಾಳಿಂಗಗಳು ತಮ್ಮ ಜೀವನದ ಬಹುಭಾಗವನ್ನು ಕಾಡಿನ ಹೊರಗೆ ಕಳೆಯುವುದು ನಮ್ಮ ತಿಳುವಳಿಕೆಗೆ ಬಂದಿದೆ.

ಕಾಳಿಂಗ ಸರ್ಪದ ಕಡಿತ ಬಲು ಅಪರೂಪ. ಕಾಳಿಂಗ ಹಾವುಗಳು ಬಲು ಸಂಕೋಚದ ಮತ್ತು ಚಾಣಕ್ಷ ಸ್ವಭಾವ ಹೊಂದಿದ್ದು ಮನುಷ್ಯ ಸಂಪರ್ಕವನ್ನು ಇಷ್ಟಪಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮನುಷ್ಯ ವಾಸಿಸುವ ಸ್ಥಳಗಳಿಗೂ ಬರುವುದುಂಟು. ಇದಕ್ಕೆ ಮುಖ್ಯ ಕಾರಣ ಸಾಕು ನಾಯಿ, ಬೆಕ್ಕು ಮತ್ತು ಹಸುಗಳಿಂದ ರಕ್ಷಣೆ ಪಡೆಯುವುದಕ್ಕೆ. ಅದೂ ಕೂಡ ಮನೆಯಲ್ಲಿ ಶುಚಿತ್ವ ಇಲ್ಲದೆ ಇದ್ದು, ಕಾಡಿನ ಹತ್ತಿರವಿದ್ದಾಗ ಅಂತಹ ಸ್ಥಳಕ್ಕೆ ರಕ್ಷಣೆ ಪಡೆಯಲು ಬರುವ ಇತರೆ ಹಾವುಗಳು ಭೇಟೆಯಾಡಲಿಕ್ಕೆ. ಉದಾ: ಕೇರೆ ಹಾವು ಮತ್ತು ಇತರೆ. **ನಮಗೆ ಒದಗಿ ಬಂದ ಮುಖ್ಯ ತಿಳುವಳಿಕೆಯೆಂದರೆ ಕಾಳಿಂಗ ಹಾವುಗಳು ಸಣ್ಣಕಾಡುಗಳ ಮೂಲಕ ಚಲಿಸುವ ಸಂದರ್ಭದಲ್ಲಿ ಕೆಲ ಬಾರಿ ಮನುಷ್ಯ ವಸತಿಗಳ ಬಳಿ ಬರುತ್ತವೆ, ಆಗ ಜನರು ಹಾವನ್ನು ಹಿಡಿಯುವ ಪ್ರಯತ್ನ ಮಾಡುತ್ತಾರೆ ಇಲ್ಲವೆ ಹೆದರಿಸಿ ಓಡಿಸುತ್ತಾರೆ. ಇದು ಹಾವಿನ ನೈಸರ್ಗಿಕ ನಡವಳಿಕೆಗೆ ತುಂಬಾ ತೊಂದರೆಗೀಡು ಮಾಡುತ್ತದೆ.**




ಅರಣ್ಯ ಪ್ರದೇಶದಲ್ಲಿ ನಡೆಸುವ ಅಭಿವೃದ್ಧಿ ಮತ್ತು ಉದ್ಯಮೀಕರಣ ಅರಣ್ಯ ನಾಶಕ್ಕೆ ಕಾರಣವಾಗುತ್ತದೆ. ಇದು ಕಾಳಿಂಗ ಹಾವುಗಳ ನೆಲೆಗಳ ನಾಶಕ್ಕೆ ಕಾರಣವಾಗುತ್ತದೆ ಹಾಗು ಅವುಗಳು ಮನುಷ್ಯ ವಸತಿಯ ಕಡೆ ಬರುತ್ತವೆ. ಇದು ಮನುಷ್ಯ ಹಾಗೂ ಕಾಳಿಂಗ ಹಾವುಗಳ ನಡುವೆ ಹೆಚ್ಚುತ್ತಿರುವ ಸಂಘರ್ಷಕ್ಕೆ ಬಹುಮುಖ್ಯ ಕಾರಣ.

**ಪರಿಹಾರೋಪಾಯಗಳು, ಮುಂಜಾಗ್ರತೆ**

ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಡಿ, ಮುಖ್ಯವಾಗಿ ಮಳೆಗಾಲದಲ್ಲಿ. ರಾತ್ರಿ ಮನೆಯಿಂದ ಹೊರಗೆ ಹೋಗುವಾಗ ಟಾರ್ಚ್ ದೀಪಗಳನ್ನು ಉಪಯೋಗಿಸಿ. ಹಾವುಗಳನ್ನು ಹಿಡಿಯಲು ಹೋಗಬೇಡಿ ಹಾಗೂ ಹೆದರಿಸಿ ಓಡಿಸಲು ಮುಂದಾಗಬೇಡಿ. ಹಾವು ಮನೆಯ ಒಳಗೆ ಇದ್ದಾಗ ಅಥವಾ ತಪ್ಪಿಸಿಕೊಂಡು ಹೋಗಲಾರದ ಸ್ಥಳದಲ್ಲಿ ಸಿಕ್ಕಿಹಾಕಿಕೊಂಡಾಗ ಅರಣ್ಯ ಇಲಾಖೆಯನ್ನು ಇಲ್ಲವೆ ನುರಿತ ತಜ್ಞರನ್ನು ಸಂಪರ್ಕಿಸಿ. ಜನರಿಗೆ ಹಾವುಗಳ ಬಗ್ಗೆ ಯಾವಾಗಲೂ ಹೆದರಿಕೆ ಇರುತ್ತದೆ ಅದಕ್ಕೆ ಕಾರಣ ಹಾವುಗಳ ಬಗೆಗಿನ ತಿಳುವಳಿಕೆಯ ಕೊರತೆ. ಪರಿಸರದಲ್ಲಿ ಹಾವುಗಳ ಉಪಯುಕ್ತತೆಯನ್ನು ಮತ್ತು ಅವುಗಳೊಂದಿಗೆ ಸಹಜೀವನ ನಡೆಸುವುದನ್ನು ನಾವು ಮುಖ್ಯವಾಗಿ ಅರಿಯಬೇಕಾಗಿದೆ.



- ಅಜಯ ಗಿರಿ,
ajay.arrs@gmail.com.
'ಆಗುಂಬೆಯ ಮಳೆಕಾಡು ಸಂಶೋಧನಾ ಕೇಂದ್ರ (ARRS)',
ಆಗುಂಬೆ, ತೀರ್ಥಹಳ್ಳಿ ತಾಲ್ಲೂಕು. ಶಿವಮೊಗ್ಗ ಜಿಲ್ಲೆ, ಕರ್ನಾಟಕ.



# ಚಿಟ್ಟೆ ಗುರುತು

* ಒಡವೆ ಚಿಟ್ಟೆ

Grass Jewel
Freyera trochylas

ನಾಗರಹೊಳೆ ಅಭಯಾರಣ್ಯ ಮತ್ತು ಬಂಡೀಪುರದ ವನ್ಯಜೀವ ರಾಶಿಗೂ ಬೇಸಿಗೆಯಲ್ಲಿ ನೀರೆರೆದು ಹಸಿವನ್ನು ನೀಗಿಸುವ ತಾಣವೇ ಕಬಿನಿ ಹಿನ್ನೀರು, ವಿಶ್ವೇಶ್ವರಯ್ಯನವರ ಸಾರಥ್ಯದಲ್ಲಿ ಕಟ್ಟಲಾದ ಕಬಿನಿ ಅಣ್ಣೆಕಟ್ಟು ಇಂದು ಬೇಸಿಗೆಯಲ್ಲಿ ಕಾನನಕ್ಕೆ ಜೀವಜಲವೆಂದರೆ ತಪ್ಪಾಗಲಾರದು ಪ್ರತೀ ಬೇಸಿಗೆಯಲ್ಲೂ ತಪ್ಪದೇ ಕಬಿನಿ ಹಿನ್ನೀರಿನ ನೋಟವನ್ನು ಸವಿಯಲು ಹೋಗೇ ಹೋಗುವ ನಾವುಗಳು, ಕಳೆದ ವರ್ಷ ಜಕ್ಕಳ್ಳಿ, ಗಂಡತ್ತೋರುಗೆ ಹೋದೆವು. ಬೇಸಿಗೆಯಲ್ಲಿ ನದಿ ಹರಿವು ಕಡಿಮೆಯಾಗಿ ಬತ್ತಿದ ಜಾಗವೆಲ್ಲಾ ಬಾಯಿ ಬಿಟ್ಟಂತೆ ಕಂಡರೂ ಒಳಗೊಂದು ಜೀವ ವನ್ಯಮೃಗಗಳ ಆಹ್ವಾನಕ್ಕೆ ಹಾತೊರೆಯುತ್ತಿರುತ್ತದೆ. ಹೀಗೆ ಇಲ್ಲಿ ಬೆಳೆದ ಹುಲ್ಲನ್ನ ಮೇಯಲು ಆನೆ, ಜಿಂಕೆ, ಕಾಡೆಮ್ಮೆ ಮೊದಲಾದ ವನ್ಯಜೀವಿಗಳು ಹಿಂಡು ಹಿಂಡಾಗಿ ಬಂದು ಸೇರುವ ಕ್ಷಣ ನೋಡಲು ಮನಸ್ಸಿಗೆ ಉಲ್ಲಾಸವನ್ನು ತರುತ್ತದೆ. ಆದರೆ ಈ ವನ್ಯ ಮೃಗಗಳೊಟ್ಟಿಗೆ ನಮ್ಮ ದನ ಕರುಗಳು ಮೇಯುವ ಹವ್ಯಾಸವನ್ನು ಬೆಳಸಿ ಕೊಂಡಿರುವುದು ಅವಾಂತರಕ್ಕೆ ಎಡೆಮಾಡಿದ್ದು ಹೌದು.




ಈ ಕಬಿನಿ ಹಿನ್ನೀರಿನ ಆಜುಬಾಜಿನಲ್ಲೇ ಇರುವ ಗಂಡತ್ತೂರಿನ ಜನ ವ್ಯವಸಾಯವನ್ನೇ ಆಧರಿಸಿದ್ದಾರೆ. ಇಲ್ಲಿ ಅವರೆ, ಹತ್ತಿ, ಮೊದಲಾದ ಬೆಳೆಗಳನ್ನೂ ಬೆಳೆಯುವಂತೆ ನಮ್ಮ ಭೇಟಿಯ ಸಮಯದಲ್ಲಿ ಗಂಡತ್ತೂರಿನ ಹಿನ್ನೀರಿನ ಪಕ್ಕದಲ್ಲೆ ಬೆಳೆದಿದ್ದ ಅವರೆ ಹೊಲದಲ್ಲಿ ಅವರೆ ಗಿಡ ಆಗತಾನೆ ಹೂಬಿಟ್ಟು ಸೊಗಡು ಸುತ್ತಲೂ ಪಸರಿಸಿತ್ತು. ಅಲ್ಲಿ ಕಂಡಿದ್ದೇ ಈ **ಒಡವೆ ಚಿಟ್ಟೆ**. ಈ ಚಿಟ್ಟೆ ನೋಡಲು 5-22 ಮೀ ಮೀ ಅಗಲದ ರೆಕ್ಕೆಗಳನ್ನು ಹೊಂದಿದ್ದು, ನೋಡಲು ಬೂದಿ ಬಣ್ಣದಿಂದ ಕೂಡಿದ್ದು, ರೆಕ್ಕೆಯ ಮೇಲೆ 2 ಕಪ್ಪು ಚುಕ್ಕಿಗಳಿರುತ್ತವೆ, ಕೆಳ ರೆಕ್ಕೆಯ ತುದಿಯಲ್ಲಿ ಕಪ್ಪು ಚುಕ್ಕಿಗಳು ತಿಳಿಹಸಿರು ಮತ್ತು ಕಿತ್ತಳೆ ಬಣ್ಣದಿಂದ ಆವೃತಗೊಂಡಿರುವ ಐದು ಚುಕ್ಕಿಗಳು ಬಂಗಾರದ ಒಡವೆಗಳನ್ನು ಪೋಣಿಸಿದಂತೆ ಕಾಣುತ್ತವೆ. ಗಂಡು ಮತ್ತು ಹೆಣ್ಣು ಚಿಟ್ಟೆಗಳು ಎರಡೂ ನೋಡಲು ಒಂದೆ ರೀತಿ ಇರುತ್ತವೆ.

- ಮಹದೇವ ಕೆ.ಸಿ




# ಹಾವು ಹಾರುತಿದೆ ನೋಡಿದಿರಾ?



ಮರದ ಮೇಲೆ ವಾಸಿಸುವ ಹಲ್ಲಿ ಹಾಗು ಹಕ್ಕಿಗಳ ಮೊಟ್ಟೆಗಳನ್ನು ತಿನ್ನಲು ಹಾವುಗಳೂ ಮರ ಏರುವುದು ಸಾಮಾನ್ಯ. 50ಅಡಿ ಎತ್ತರದ ಮರಕ್ಕೆ ನಿರಾಯಾಸವಾಗಿ ಏರುವ ಹಾವುಗಳು ಮರದಿಂದ ಕೆಳಗಿಳಿಯುವಾಗ ಕೆಲವೊಮ್ಮೆ ದೊಪ್ಪನೆ ಬೀಳುತ್ತವೆ. ಆಕಾಶದಲ್ಲಿ ಹಾರುವ ಹದ್ದುಗಳ ಕಣ್ಣು ಯಾವಾಗಲು ಕೆಳಗೇ ನೋಡುತ್ತಿರುತ್ತವೆ ಇದರಿಂದ ಎತ್ತರದ ಮರದ ಮೇಲೆ ಅಪಾಯವು ಹೆಚ್ಚು. ಈ ಹದ್ದುಗಳು ಏನಾದರು ಹಾವನ್ನು ಹಿಡಿಯಲು ಬಂದರೆ ತಪ್ಪಿಸಿ ಕೊಳ್ಳಲು ಹಾವುಗಳಿಗಿರುವ ಒಂದೇ ಮಾರ್ಗ ಗಾಳಿಗೆ ಜಿಗಿಯುವುದು !.




ಬಾಲವನ್ನು ಯಾವುದಾದರು ಕೊಂಬೆಗೆ ಸುತ್ತಿ, ತಲೆಕೆಳಗಾಗಿ ಜೋತು ಬಿದ್ದು, ತಲೆಯನ್ನು ಹಿಂಸೆಳೆದು, ಕೊಂಬೆಯನ್ನು ತಳ್ಳಿ ಒಂದೇ ನೆಗತಕ್ಕೆ ಗಾಳಿಯನ್ನು ಸೀಳಿ ಕ್ಷಣಾರ್ಧದಲ್ಲಿ ಗಾಳಿಗೆ ಹಾರಿ ಜೀವ ಉಳಿಸಿ ಕೊಳ್ಳುತ್ತವೆ. ಈ ತತ್ವವನ್ನೇ ಕಸುಬಾಗಿಸಿಕೊಂಡ. *ಪ್ಯಾರಡೈಸ್ ಗ್ಲೈಡಿಂಗ್ ಹಾವು* ಎತ್ತರದ ಮರದಿಂದ ಗಾಳಿಗೆ ಜಿಗಿದು 20 ಮೀಟರ್ ದೂರಕ್ಕೆ ಪೇಪರ್ ರಾಕೇಟ್ ನಂತೆ ಹಾರುತ್ತದೆ. ಪ್ಯಾರಡೈಸ್ ಗ್ಲೈಡಿಂಗ್ ಹಾವಿನ ಬಗ್ಗೆ ಅಧ್ಯಯನ ನಡೆಸಿದ ಸೋಚಿ ಎಂಬ ಜೀವವಿಜ್ಞಾನಿಯು, ಈ ಹಾರುವ ಹಾವು ಹಾರುವಾಗ ತನ್ನ ಪಕ್ಕೆಲೆಬುಗಳನ್ನು ಅಗಲಿಸಿಕೊಂಡು ಚಪ್ಪಟೆ ಮಾಡಿ, ದೇಹವನ್ನು "ಎಸ್" ಆಕಾರಮಾಡಿಕೊಂಡು, ಬಾಲವನ್ನು ಅಲುಗಾಡಿಸುತ್ತಾ ಹಾರುವುದರಿಂದ ಗಾಳಿಯ ಮೇಲ್ಮುಖ ಒತ್ತಡ ಹೆಚ್ಚಿ *ಪ್ಯಾರಡೈಸ್ ಗ್ಲೈಡಿಂಗ್ ಹಾವು* ಬಹುದೂರ ಹಾರಲು ಸಹಾಯಕವಾಗಿದೆ. ಆ ಹಾವಿನ 3-D ವಿನ್ಯಾಸ ಮಾಡಿ ಹಾರುವ ವಿಧಾನವನ್ನು ಅಭ್ಯಾಸಿಸಿ ಇದರ ದೇಹದ ಚಪ್ಪಟೆ ರಚನೆ ಹಾರಲು ಸಹಯಕವಾಗಿದೆ ಎಂದು ಕಂಡುಹಿಡಿದಿದ್ದಾರೆ.



- ಶಂಕರಪ್ಪ ಕೆ.ಪಿ

# ಕಾನನ ಬಂಧ



### ಎಡದಿಂದ ಬಲಕ್ಕೆ

1. ಈ ಜೀವಿಯು ಭೂಮಿ ಹಾಗೂ ನೀರಿನಲ್ಲಿ ವಾಸ ಮಾಡಬಲ್ಲುದು (5)
2. ಗತಿಸಿ ಹೋದ ವೀರಗಾಥೆ (5)
4. ಇದು ಕಾಕಪಕ್ಷಿಯ ಕೋಟೆ ಇರಬಹುದೇ ? (5)
6. ಇಲ್ಲಿ ಆಟವೊಂದು ಪೇಚಿಗೆ ಸಿಲುಕಿದೆ. (3)
8. ಇದು ಆನೆಗಳ ಸೇನೆಯ ತುಕಡಿ. (4)
9. ನಕ್ಷತ್ರವೊಂದು, ಇಲ್ಲಿ ಶೇಖರಿಸಿಡುವ ಪಾತ್ರೆಯೂ ಹೌದು (3)
11. ಇದು ಬೆನ್ನು ಮೂಳೆ ಇರದ ಜೀವಿ (5)
12. ಈ ಹಾವಿಗೆ ಹಸಿರು ಬಣ್ಣವಿದೆ (5)
14. ನಿಧಾನವಾಗಿ ಬರುವ ಸಾವು (3)
17. ಈ ಕಪ್ಪು ಬಿಳುಪು ಬಣ್ಣದ ಹಕ್ಕಿ ಅಗಸರ ಸ್ನೇಹಿತ (6)

### ಮೇಲಿನಿಂದ ಕೆಳಕ್ಕೆ

1. ಇದು ದೈತ್ಯೋರಗಗಳ ವಂಶದ ಚಿಕ್ಕ ಪ್ರತಿನಿಧಿ (3)
3. ಮನುಕುಲವು ಬೆಳೆದು ಬಂದ ಹಾದಿ (3)
5. ಸಾಮಾನ್ಯವಾಗಿ ನರಮಾಂಸ ಸೇವಿಸುವ ಜೀವಿಗೆ ಹೀಗೆಂದು ಕರೆಯುತ್ತಾರೆ (5)
6. ಸಂತೆಗೊಂದು ಹೆಸರು (2)
7. ಗುಟುರು ಹಾಕುವುದಿಲ್ಲ ಆದರೆ ಕುರಿ ಮೇಕೆಯ ಸಾಲಿಗೆ ಸೇರಿದ್ದು (3)
10. ಹರಿಯ ಜಿಂಕೆಯು ಇಲ್ಲಿ ತಲೆ ಕೆಳಗಾಗಿದೆ (3)
13. ಬಂಡೀಪುರ ಅಭಯಾರಣ್ಯದ ಬಳಿ ಇರುವ ಈ ವನ್ಯಧಾಮಕ್ಕೆ ಕಪಿಲಾ ನದಿಯೂ ಸಂಗಾತಿಯಾಗಿದೆ (3)
15. ರೋಗದ ಜೊತೆ ಬರುವ ಮಿತ್ರ (3)
16. ಈ ಪಕ್ಷಿಗೆ ಹಾರುವುದೇ ಕೆಲಸ (4)
18. ಈ ಪಕ್ಷಿ ಪ್ರಪಂಚವು ನಮ್ಮ ಪತ್ರಿಕೆಯ ಒಂದು ಅಂಕಣವೂ ಹೌದು (4)

### ಕಾನನ ಬಂಧ ಫೆಬ್ರವರಿ ಸಂಚಿಕೆಯ ಉತ್ತರಗಳು

### ಎಡದಿಂದ ಬಲಕ್ಕೆ

1. ಮಂಗಟ್ಟೆ, 3. ಚಿರತೆ, 5. ಕರಡಿ, 7. ಚಾರಣ, 9. ಕಾನನ, 11. ಸರಹದ್ದು, 13. ಬಂಡೀಪುರ, 14. ಹಾರುವಓತಿ, 16. ಪ್ರಾಥಮಿಕ, 17. ನಾಗರಹಾವು.

### ಮೇಲಿನಿಂದ ಕೆಳಕ್ಕೆ

1. ಮಂಗಳೂರು, 2. ಕರಿಚಿಟ್ಟೆ, 4. ಮಿಡತೆ, 6. ಚಾರ್ಮಾಡಿ, 8. ರಣಹದ್ದು, 9. ಕಾಡುಕೋಣ, 10. ನರಿ, 12. ದಾಸರಹಾವು, 15. ವನ್ಯಪ್ರಾಣಿ, 17. ನಾಗರಹೊಳೆ.

- ಸುಬ್ಬು ಬಾದಲ್



# ಹಕ್ಕಿಲೋಕ


* ಭೀಮರಾಜ

**ಇಂಗ್ಲೀಷ್ ಹೆಸರು : Greater Racket-Tailed Drogo**

**ವೈಜ್ಞಾನಿಕ ಹೆಸರು : *Drcrurus paradiseus***




ನಾನು ಹೈಸ್ಕೂಲಿಗೆ ಹೋದ ನಂತರ ಕನ್ನಡ ಪುಸ್ತಕದಲ್ಲಿ ಕವಿ-ಕೃತಿ ಪರಿಚಯ ಎಂಬ ಒಂದು ಕಿರುಪರಿಚಯವಿರುತ್ತಿತ್ತು. ಆದರಲ್ಲಿ ಕವಿಗಳ ಪರಿಚಯವನ್ನು ಸವಿವರವಾಗಿ ನೀಡಲಾಗುತ್ತಿತ್ತು. ಅದು ಪರೀಕ್ಷೆಯಲ್ಲಿ ನಮಗೆ ನಾಲ್ಕು ಅಂಕದ ಪ್ರಶ್ನೆಯೂ ಹೌದು. ಅದರಿಂದ ಈ "ಕವಿಕೃತಿ" ಪರಿಚಯವನ್ನು ಕಂಠಪಾಠ ಮಾಡಿಕೊಂಡಿರುತ್ತಿದ್ದೆವು. ಕನ್ನಡದ ಪ್ರಸಿದ್ಧ ಕವಿಗಳಾದ ಕುವೆಂಪು, ಕಾರಂತ, ದ.ರಾ.ಬೇಂದ್ರೆ, ಗೋಕಾಕ, ತೇಜಸ್ವಿ ಹೀಗೆ ಹಲವು ಜನರ ಬದುಕು-ಬರಹಗಳನ್ನು ಅಭ್ಯಾಸಿಸುತ್ತಿದ್ದೆವು. ಆದರೆ ಪಠ್ಯದಲ್ಲಿ ಎಷ್ಟೋ ಅಷ್ಟೆ! ಕೃತಿಗಳ ಹೆಸರುಗಳನ್ನು ಮಾತ್ರ ಕೇಳಿರುತ್ತಿದ್ದೇವೆಯೆ ವಿನಹ ಅವರ ಪುಸ್ತಕಗಳನ್ನು ಕಣ್ಣಿನಿಂದ ನೋಡೆ ಇರುತ್ತಿರಲಿಲ್ಲ.



ಎಸ್ಸೆಸ್ಸೆಲ್ಸಿ ಮುಗಿಸಿ, ಪಿಯುಸಿ ಮೆಟ್ಟಿಲೇರಿದ ಮೇಲೆಯೇ ಅವರ ಪುಸ್ತಕಗಳನ್ನು ನೋಡಲು ಸಾಧ್ಯವಾಗಿದ್ದು. ನನಗೆ ಈಗಲೂ ಆಗಾಗ ಅನಿಸುತ್ತದೆ! ಮಕ್ಕಳಿಗೆ ಹೆಚ್ಚೆಚ್ಚು ಪುಸ್ತಕಗಳನ್ನು ಓದಲಾಗದಿದ್ದರೂ ಬರೀ ನೋಡಲಾದರೂ ಅಂತಹ ಪುಸ್ತಕಗಳು ತೋರಿಸಿದರೆ ಚಂದ ಅನಿಸುತ್ತದೆ!. ಬರಿ ಪುಸ್ತಕದ ಮುಖಪುಟವೋ, ಪುಸ್ತಕ ಒಳಗೆ ಅಡಗಿರುವ ರೇಖಾಚಿತ್ರಗಳೋ ಅಥವಾ ಛಾಯಾಚಿತ್ರಗಳನ್ನೋ ಮಕ್ಕಳು ನೋಡಿದರೆ. ಅದರ ಪ್ರಭಾವ ಮುಂದೊಂದು ದಿನ ಅಪಾರವಾದದ್ದು. ನಿಜ, ಅದರಿಂದಲೇ ಇಂದು ನನಗೆ ಸಾಹಿತ್ಯ ಓದುವ ಹುಚ್ಚು ಅಲ್ಪಸಲ್ಪ ಉಳಿದಿರುವುದು.

ಇದೆಲ್ಲ ಏಕೆ ಹೇಳುತ್ತಿದ್ದೇನೆ ಎಂದರೆ, ಕುವೆಂಪು ಅವರ ಪುಸ್ತಕಗಳ ಮುಖಪುಟದ ಮೇಲಿರುವ ಒಂದು ಲಾಂಚನದ ಬಗ್ಗೆ ಹೇಳಲು. ಸಾಮಾನ್ಯವಾಗಿ ಕುವೆಂಪು ಅವರ ಪುಸ್ತಕಗಳನ್ನು ನೋಡಿರುತ್ತೀರಾ . . . ಆ ಪುಸ್ತಕದ ಮುಖಪುಟದ ಮೇಲಿರುವ ಲಾಂಛನದಲ್ಲಿ ಎರಡು ಸುಂದರವಾದ ಪಕ್ಷಿಗಳನ್ನು ನೋಡಬಹುದು. ಅವುಗಳಿಗೆ ಭೀಮರಾಜ ಪಕ್ಷಿಗಳೆಂದು ಕರೆಯುವುದುಂಟು. ಇಂಗ್ಲೀಷ್ ನಲ್ಲಿ ಇವುಗಳಿಗೆ **"ಗ್ರೇಟರ್ ರಾಕೆಟ್-ಟೇಲ್ಡ್ ಡ್ರೋಂಗೊ"** ಎಂದೂ

ಸಂಸ್ಕೃತದಲ್ಲಿ **ಭೃಂಗರಾಜ** ಎಂತಲೂ, ಕೆಲ ಪ್ರಾದೇಶಿಕವಾಗಿ **ತಂತಿ ಬಾಲದ ಕಾಜಾಣ** ಎಂತಲೂ ಕರೆಯುವರು.




ಈ ಹಕ್ಕಿ ನೋಡಲು ಹೆಸರಿಗೆ ತಕ್ಕಂತೆ ಭೀಮರಾಜನೆ ಬಿಡಿ!, ಗೊರವಂಕಕ್ಕಿಂತ ದೊಡ್ಡದಾದ , ಕಾಗೆಗಿಂತ ಚಿಕ್ಕದಾದ ಮಿರುಗುವ ಕಪ್ಪು ಹಕ್ಕಿ. ತಲೆಯ ಮೇಲಿನ ಕಪ್ಪು ಪುಕ್ಕಗಳು, ತಲೆ ಕೂದಲು ಕೆದರಿಕೊಂಡಂತೆ ಕಾಣುತ್ತದೆ. ಭೀಮರಾಜನ ಬಾಲದ ತುದಿಯಲ್ಲಿ ಪೊರಕೆ ಕಡ್ಡಿಯಂತಹ ನೀಳವಾದ ಗರಿಗಳಿರುತ್ತವೆ. ಹಾರುವಾಗ ಬಾಲದ ತುದಿಯ ಗರಿ ಭೀಮರಾಜನನ್ನು ಎರಡು ದುಂಬಿಗಳು ಅಟ್ಟಿಸಿಕೊಂಡು ಹಿಂಬಾಲಿಸಿದಂತೆ ಭಾಸವಾಗುತ್ತದೆ. ಈ ಹಕ್ಕಿಗಳು ಮಲೆನಾಡಿನ ಕಾಡುಗಳಲ್ಲಿ ಅಥವಾ ಅರೆನಿತ್ಯಹರಿದ್ವರ್ಣ ಕಾಡುಗಳ ದೊಡ್ಡ ದೊಡ್ಡ ಮರಗಳ ಸಾಲುಗಳಲ್ಲಿ ಕಂಡುಬರುತ್ತವೆ.

ಕುವೆಂಪುರವರ ಮಲೆನಾಡಿನ ಚಿತ್ರಗಳಲ್ಲಿ ಈ ಹಕ್ಕಿಗಳು ಕಣ್ಮುಂದೆ ಹಾದು ಹೋಗುತ್ತವೆ, ಇವು ಮಲೆನಾಡಿನಲ್ಲಿ ಹೆಚ್ಚಾಗಿ ಕಂಡು ಬರುವುದರಿಂದಲೇ ಕುವೆಂಪುರವರ ಪುಸ್ತಕಗಳಲ್ಲಿ ಪದೇ ಪದೇ ಮೂಡಿಬಂದಿರಬಹುದು. ಭೀಮರಾಜ ಹಕ್ಕಿಗಳು ಮಲೆನಾಡು ಕಾಡಿನ ಮರಗಳ ಮೇಲೆ ಕಡ್ಡಿ, ಹುಲ್ಲು, ಜೇಡರ ಬಲೆಯಿಂದ ಕೂಡಿದ ಬಟ್ಟಲಿನಾಕಾರದ ಗೂಡನ್ನು ಕಟ್ಟುತ್ತವೆ. ಸಾಮಾನ್ಯವಾಗಿ ಮಾರ್ಚ್ ತಿಂಗಳಿಂದ ಜೂನ್ ನಲ್ಲಿ ಮೊಟ್ಟೆಗಳಿಟ್ಟು ಮರಿ ಮಾಡುತ್ತವೆ. ಮುಖ್ಯವಾಗಿ ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿ ಕಂಡುಬರುವ ಹಕ್ಕಿಗಳು ಇವು.

ಶಾಲಾಮಕ್ಕಳಲ್ಲಿ ಸಾಹಿತ್ಯದ ಬಗ್ಗೆ ಆ ಪುಸ್ತಕಗಳಲ್ಲಿರುವ ಕೆಲ ಛಾಯಾಚಿತ್ರಗಳನ್ನು ನೋಡಿದರೆ ಸಾಕು ಏನೇನೆಲ್ಲ ಕಲಿಯಬಹುದು. ಕಾಡು, ಪರಿಸರ, ಜೀವವೈವಿಧ್ಯ, ಹಕ್ಕಿಗಳು, ಪ್ರಾಣಿಗಳ ಬಗ್ಗೆ ಆಸಕ್ತಿ ಬರಲು ಅಥವಾ ಅವುಗಳ ಜೀವನ ಶೈಲಿಯನ್ನು ತಿಳಿಯಲು ಚಿಕ್ಕಂದಿನಿಂದಲೇ ಕುವೆಂಪು, ಕಾರಂತ, ತೇಜಸ್ವಿರವರಂತಹ ಪುಸ್ತಕಗಳನ್ನು ಮಕ್ಕಳ ಕೈಗೆ ಸಿಗುವಂತೆ ಇರಿಸಿದರೆ ಅವರುಗಳ ಜೀವನ ಶೈಲಿಯನ್ನು ತಕ್ಕಮಟ್ಟಿಗೆ ಬದಲಿಸಲು ಸಾಧ್ಯವಾಗಬಹುದು. ಆ ಮಕ್ಕಳ ಮನಸ್ಸನ್ನು ಒಂದು ಹೊಸ ಲೋಕಕ್ಕೆ ಕರೆದುಕೊಂಡು ಹೋಗಬಹುದು. ಈ ಜಗತ್ತಿನ ಸೊಬಗನ್ನು, ನಿಸರ್ಗವನ್ನು ನಮಗೆ ಎಷ್ಟೋ ಹತ್ತಿರಾಗಿಸಿಕೊಳ್ಳಬಹುದು.

- ಅಶ್ವಥ ಕೆ.ಎನ್



# ಪ್ರಕೃತಿ ಬಿಂಬ





# ಮುಸ್ಸಂಜೆಯ ಹನಿಗಳು

ದಿನವೊಂದರ ಸಂಜೆ ಐದರಲ್ಲಿ
ಆಗಸದ ತುಂಬೆಲ್ಲಾ ಮೋಡಗಳಾವರಿಸಿ
ಕಾರ್ಮೋಡವೊಂದು ಕರಗಿ
ಮುತ್ತಿನಹನಿಗಳು ಸುರಿದು
ಜಗವೊಂದು ಕ್ಷಣ ಸ್ತಬ್ಧವಾಗಿರಲು
ಕರಗಿದ ಮೋಡದಂಚಿನಿಂದ ರವಿಇಣುಕಿದ
ಮುತ್ತಿನ ಮಳೆಹನಿಯ ಸಾಲು ಸಾಲೊಳಗೆ
ಹೊಳೆವ ಸೂರ್ಯನ ಬಿಸಿಲು ಕೋಲೊಂದು ತೂರಿ
ತೆಳುನೀಲಿ ಬಾನಂಗಳದಲ್ಲಿ ಮೂಡಿತೊಂದು ಕಾಮನಬಿಲ್ಲು.

ಇದಲೆಕ್ಕಿಸದೆ ಮೋಡ ಕರಗಿರಲು
ರವಿ ಇಣುಕುತಿದ್ದ ಧರಣಿಯತ್ತ
ಕಾಲ ಬಂದೆರಗಿ ರವಿಯ ಜಗ್ಗುತಿದ್ದ
ಪಡುವಣದಿ ಬಾನಿಳೆ ಸಂಧಿಸುವತ್ತ
ಇತ್ತ ಧರೆಯಲ್ಲಿ ಮುತ್ತಿನ ಹನಿಗಳು
ಕೆಸರಲ್ಲಿ ಕರಗಿ ಮತ್ತೆ ಒಂದಾದವು
ಮುಂಗಾರಿನ ಮೊದಲ ಮಳೆಯಲ್ಲಿ ಮಿಂದು
ಭೂತಾಯಿಯ ಹಸಿಮೈ ಕಂಪು ಸೂಸಿರಲು
ಉದ್ದೀಪನ ಗೊಂಡು ಉಲ್ಲಾಸದಿ ಜೀಕಿ ತೊಂದು ಹುಲ್ಲುಗರಿಕೆ.



- ಚರಣರಾಜ ಮತ್ತೀಹಳ್ಳಿ